# ಶ್ರೀ ಸಿದ್ದೇಶ್ವರ ಸಹಕಾರಿ ಬ್ಯಾಂಕ ನಿಯಮಿತ, ವಿಜಯಪುರ

ನಂ.ಆಡಳಿತ/ಸಿಬ್ಬಂದಿ/ನೇಮಕಾತಿ/988/2024
ವಿಜಯಪುರ, ದಿನಾಂಕ:02-07-2024

## -: ಅಧಿಸೂಚನೆ :-

ಮಾನ್ಯ ನಿಬಂಧಕರು, ಸಹಕಾರ ಸಂಘಗಳು, ಬೆಂಗಳೂರು ಇವರ ಆದೇಶ ಸಂಖ್ಯೆ:ಯುಬಿಸಿ-7/105/ಯುಸಿಎಸ್/2023-24, ದಿನಾಂಕ:18.04.2024 ರಡಿಯಲ್ಲಿ ಹೊರಡಿಸಿದ ಆದೇಶದ ಮೇರೆಗೆ ಶ್ರೀ ಸಿದ್ದೇಶ್ವರ ಸಹಕಾರಿ ಬ್ಯಾಂಕ ನಿ., ವಿಜಯಪುರ ಇದರಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳ ನೇರ ನೇಮಕಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು ಇಚ್ಛೆವುಳ್ಳ ಅಭ್ಯರ್ಥಿಗಳು Online ಮುಖಾಂತರ ದಿನಾಂಕ:04-07-2024 ರಿಂದ 31-07-2024 ರವರೆಗೆ ಅರ್ಜಿಗಳು Online ನಲ್ಲಿ ಲಭ್ಯವಿರುತ್ತದೆ. ಅರ್ಜಗಳನ್ನು Online ನಲ್ಲಿ ದಿನಾಂಕ:31-07-2024 ರಂದು ಸಾಯಂಕಾಲ 5.00 ಘಂಟೆ ಒಳಗಾಗಿ ಸಲ್ಲಿಸಲು ಅವಕಾಶವಿರುತ್ತದೆ. Online ಮುಖಾಂತರ ಅರ್ಜಿ ಸಲ್ಲಿಸಲು,

Website Link : https://ssbankvijayapur.com ಇದರಲ್ಲಿ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.

ನೇಮಕಾತಿ ಮಾಡಲು ಉದ್ದೇಶಿಸಿದ ವಿವಿಧ ಹುದ್ದೆಗಳನ್ನು ಸರಕಾರದ ಆದೇಶದ ಪ್ರಕಾರ ಈ ಕೆಳಕಂಡಂತೆ ವರ್ಗೀಕರಿಸಿ ಮೀಸಲಿರಿಸಲಾಗಿದೆ.

### 1. ಹುದ್ದೆಗಳ ವಿವರ :-

| ಅ.ನಂ. | ಹುದ್ದೆಯ ಹೆಸರು | ಒಟ್ಟು ಹುದ್ದೆ |
|---|---|---|
| 1) | ಪ್ರಧಾನ ವ್ಯವಸ್ಥಾಪಕರು | 01 |
| 2) | ವ್ಯವಸ್ಥಾಪಕರು | 01 |
| 3) | ಹಿರಿಯ ವ್ಯವಸ್ಥಾಪಕರು | 11 |
| 4) | ಕಂಪ್ಯೂಟರ್ ಇಂಜಿನಿಯರ್ | 01 |
| 5) | ಕಿರಿಯ ವ್ಯವಸ್ಥಾಪಕರು | 04 |
| 6) | ಹಿರಿಯ ಸಹಾಯಕರು | 13 |
| 7) | ಕಿರಿಯ ಸಹಾಯಕರು | 11 |
| 8) | ಅಟೆಂಡರ್/ಜವಾನ/ವಾಚಮೆನ್ | 05 |
| 9) | ವಾಹನ ಚಾಲಕ | 01 |
| | **ಒಟ್ಟು** | **48** |

### 2. ವೇತನ ಶ್ರೇಣಿ ರೂ :

1) ಪ್ರಧಾನ ವ್ಯವಸ್ಥಾಪಕರು : ರೂ.44250-1550-45300-1200-52500-1350-60600.
2) ವ್ಯವಸ್ಥಾಪಕರು : ರೂ.30400-800-33600-900-39000-1050-45300-1200-51300.
3) ಹಿರಿಯ ವ್ಯವಸ್ಥಾಪಕರು : ರೂ.28100-700-28800-800-33600-900-39000-1050-45300-1200-50100.
4) ಕಂಪ್ಯೂಟರ್ ಇಂಜಿನಿಯರ್ : ರೂ.28100-700-28800-800-33600-900-39000-1050-45300-1200-50100.
5) ಕಿರಿಯ ವ್ಯವಸ್ಥಾಪಕರು : ರೂ.22800-600-24600-700-28800-800-33600-900-39000-1050-43200.

6) ಹಿರಿಯ ಸಹಾಯಕರು : ರೂ.21600–600–24600–700–28800–800–33600–900–39000–1050–40050.

7) ಕಿರಿಯ ಸಹಾಯಕರು : ರೂ.20000–500–21000–600–24600–700–28800–800–33600–900–36300.

8) ಅಟೆಂಡರ್/ಜವಾನ/ವಾಚಮೆನ್ : ರೂ.14550–350–15600–400–17200–450–19000–500–21000–600–24600–700–26700.

9) ವಾಹನ ಚಾಲಕ : ರೂ.14550–350–15600–400–17200–450–19000–500–21000–600–24600–700–26700.

ಮತ್ತು ನಿಯಮಾನುಸಾರ ತುಟ್ಟಿ ಭತ್ಯೆ ಹಾಗೂ ಇತರೆ ಭತ್ಯೆಗಳು.

**3. ವಿದ್ಯಾರ್ಹತೆ :**

**1) ಪ್ರಧಾನ ವ್ಯವಸ್ಥಾಪಕರು :** ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಸ್ನಾತಕ್ಕೋತ್ತರ ವಿಶ್ವವಿದ್ಯಾಲಯದ ಪದವಿ, ಕಂಪ್ಯೂಟರ ಪರಿಜ್ಞಾನ ಹಾಗೂ ಕನಿಷ್ಠ ಐದು ವರ್ಷ ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸಿದ ಅನುಭವ ಹೊಂದಿರಬೇಕು. ಈ ಹುದ್ದೆಗೆ ಪದವೀಧರರು ತಮ್ಮ ಪದವಿಯ ಎಲ್ಲ ವರ್ಷ/ಸೆಮಿಸ್ಟರ್‌ಗಳ ಸರಾಸರಿ ಸಾಮಾನ್ಯ/ ಇತರೇ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಕನಿಷ್ಠ ಶೇ.60 ರಷ್ಟು ಅಂಕ ಪಡೆದಿರಬೇಕು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಅಭ್ಯರ್ಥಿಗಳು ಕನಿಷ್ಠ ಶೇ.45 ಅಂಕ ಪಡೆದಿರಬೇಕು. ಜಿ.ಡಿ.ಸಿ/ ಎಚ್.ಡಿ.ಸಿ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.

2) **ವ್ಯವಸ್ಥಾಪಕರು :** ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದ ಪದವಿ, ಕಂಪ್ಯೂಟರ ಪರಿಜ್ಞಾನ ಹಾಗೂ ಕನಿಷ್ಠ ಮೂರು ವರ್ಷ ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸಿದ ಅನುಭವ ಹೊಂದಿರಬೇಕು. ಈ ಹುದ್ದೆಗೆ ಪದವೀಧರರು ತಮ್ಮ ಪದವಿಯ ಎಲ್ಲ ವರ್ಷ/ಸೆಮಿಸ್ಟರ್‌ಗಳ ಸರಾಸರಿ ಸಾಮಾನ್ಯ/ ಇತರೇ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಕನಿಷ್ಠ ಶೇ.60 ರಷ್ಟು ಅಂಕ ಪಡೆದಿರಬೇಕು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಅಭ್ಯರ್ಥಿಗಳು ಕನಿಷ್ಠ ಶೇ.45 ಅಂಕ ಪಡೆದಿರಬೇಕು. ಜಿ.ಡಿ.ಸಿ/ ಎಚ್.ಡಿ.ಸಿ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.

3) **ಹಿರಿಯ ವ್ಯವಸ್ಥಾಪಕರು :** ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದ ಪದವಿ, ಕಂಪ್ಯೂಟರ ಪರಿಜ್ಞಾನ ಹಾಗೂ ಕನಿಷ್ಠ ಮೂರು ವರ್ಷ ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸಿದ ಅನುಭವ ಹೊಂದಿರಬೇಕು. ಈ ಹುದ್ದೆಗೆ ಪದವೀಧರರು ತಮ್ಮ ಪದವಿಯ ಎಲ್ಲ ವರ್ಷ/ಸೆಮಿಸ್ಟರ್‌ಗಳ ಸರಾಸರಿ ಸಾಮಾನ್ಯ/ ಇತರೇ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಕನಿಷ್ಠ ಶೇ.60 ರಷ್ಟು ಅಂಕ ಪಡೆದಿರಬೇಕು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಅಭ್ಯರ್ಥಿಗಳು ಕನಿಷ್ಠ ಶೇ.45 ಅಂಕ ಪಡೆದಿರಬೇಕು. ಜಿ.ಡಿ.ಸಿ/ ಎಚ್.ಡಿ.ಸಿ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.

4) **ಕಂಪ್ಯೂಟರ್ ಇಂಜಿನಿಯರ್ :** ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದ ಬಿ.ಇ. (ಕಂಪ್ಯೂಟರ್ ಸಾಯನ್ಸ/ಇ ಮತ್ತು ಸಿ)/ ಎಂ.ಸಿ.ಎ. ಈ ಹುದ್ದೆಗೆ ಪದವೀಧರರು ತಮ್ಮ ಪದವಿಯ ಎಲ್ಲ ವರ್ಷ/ಸೆಮಿಸ್ಟರ್‌ಗಳ ಸರಾಸರಿ ಸಾಮಾನ್ಯ/ ಇತರೇ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಕನಿಷ್ಠ ಶೇ.60 ರಷ್ಟು ಅಂಕ ಪಡೆದಿರಬೇಕು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಅಭ್ಯರ್ಥಿಗಳು ಕನಿಷ್ಠ ಶೇ.45 ಅಂಕ ಪಡೆದಿರಬೇಕು.

5) **ಕಿರಿಯ ವ್ಯವಸ್ಥಾಪಕರು** : ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದ ಪದವಿ, ಕಂಪ್ಯೂಟರ ಪರಿಜ್ಞಾನ ಹಾಗೂ ಕನಿಷ್ಠ ಮೂರು ವರ್ಷ ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸಿದ ಅನುಭವ ಹೊಂದಿರಬೇಕು. ಈ ಹುದ್ದೆಗೆ ಪದವೀಧರರು ತಮ್ಮ ಪದವಿಯ ಎಲ್ಲ ವರ್ಷ/ಸೆಮಿಸ್ಟರ್‌ಗಳ ಸರಾಸರಿ ಸಾಮಾನ್ಯ/ ಇತರೇ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಕನಿಷ್ಠ ಶೇ.60 ರಷ್ಟು ಅಂಕ ಪಡೆದಿರಬೇಕು. ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಅಭ್ಯರ್ಥಿಗಳು ಕನಿಷ್ಠ ಶೇ.45 ಅಂಕ ಪಡೆದಿರಬೇಕು. ಜಿ.ಡಿ.ಸಿ/ ಎಚ್.ಡಿ.ಸಿ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.

6) **ಹಿರಿಯ ಸಹಾಯಕರು** : ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದ ಪದವಿ, ಕಂಪ್ಯೂಟರ ಪರಿಜ್ಞಾನ ಹೊಂದಿರಬೇಕು. ಈ ಹುದ್ದೆಗೆ ಪದವೀಧರರು ತಮ್ಮ ಪದವಿಯ ಎಲ್ಲ ವರ್ಷ/ಸೆಮಿಸ್ಟರ್‌ಗಳ ಸರಾಸರಿ ಸಾಮಾನ್ಯ/ ಇತರೇ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಕನಿಷ್ಠ ಶೇ.60 ರಷ್ಟು ಅಂಕ ಪಡೆದಿರಬೇಕು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಅಭ್ಯರ್ಥಿಗಳು ಕನಿಷ್ಠ ಶೇ.45 ಅಂಕ ಪಡೆದಿರಬೇಕು. ಜಿ.ಡಿ.ಸಿ/ ಎಚ್.ಡಿ.ಸಿ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.

7) **ಕಿರಿಯ ಸಹಾಯಕರು** : ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದ ಪದವಿ, ಕಂಪ್ಯೂಟರ ಪರಿಜ್ಞಾನ ಹೊಂದಿರಬೇಕು. ಈ ಹುದ್ದೆಗೆ ಪದವೀಧರರು ತಮ್ಮ ಪದವಿಯ ಎಲ್ಲ ವರ್ಷ/ಸೆಮಿಸ್ಟರ್‌ಗಳ ಸರಾಸರಿ ಸಾಮಾನ್ಯ/ ಇತರೇ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಕನಿಷ್ಠ ಶೇ.60 ರಷ್ಟು ಅಂಕ ಪಡೆದಿರಬೇಕು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಅಭ್ಯರ್ಥಿಗಳು ಕನಿಷ್ಠ ಶೇ.45 ಅಂಕ ಪಡೆದಿರಬೇಕು ಜಿ.ಡಿ.ಸಿ/ ಎಚ್.ಡಿ.ಸಿ ಹೊಂದಿದವರಿಗೆ ಆದ್ಯತೆ ನೀಡಲಾಗುವುದು.

8) **ಅಟೆಂಡರ್/ಜವಾನ/ವಾಚಮೆನ್** : ಕರ್ನಾಟಕ ಬೋರ್ಡ/ ಸಿಬಿಎಸ್‌ಸಿ ಬೋರ್ಡ ನಿಂದ ಎಸ್.ಎಸ್.ಎಲ್.ಸಿ ತೇರ್ಗಡೆಯಾಗಿರಬೇಕು. ಸಾಮಾನ್ಯ/ ಇತರೇ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಕನಿಷ್ಠ ಶೇ.60 ರಷ್ಟು ಅಂಕ ಪಡೆದಿರಬೇಕು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಅಭ್ಯರ್ಥಿಗಳು ಕನಿಷ್ಠ ಶೇ.45 ಅಂಕ ಪಡೆದಿರಬೇಕು.

9) **ವಾಹನ ಚಾಲಕ** : ಕರ್ನಾಟಕ ಬೋರ್ಡ/ ಸಿಬಿಎಸ್‌ಸಿ ಬೋರ್ಡ ನಿಂದ ಎಸ್.ಎಸ್.ಎಲ್.ಸಿ ತೇರ್ಗಡೆಯಾಗಿರಬೇಕು. ಸಾಮಾನ್ಯ/ ಇತರೇ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ಕನಿಷ್ಠ ಶೇ.60 ರಷ್ಟು ಅಂಕ ಪಡೆದಿರಬೇಕು ಹಾಗೂ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಅಭ್ಯರ್ಥಿಗಳು ಕನಿಷ್ಠ ಶೇ.45 ಅಂಕ ಪಡೆದಿರಬೇಕು. ಅಭ್ಯರ್ಥಿಗಳು ವಾಹನ ಚಾಲನೆಯ ಚಾಲ್ತಿ (ಎಲ್‌ಎಮ್‌ವ್ಹಿ) ಲೈಸನ್ಸ ಹೊಂದಿರತಕ್ಕದ್ದು.

**4. ವಯೋಮಿತಿ :**

ಅಭ್ಯರ್ಥಿಯು ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಕ್ಕೆ 18 ವರ್ಷ ಪೂರೈಸಿರಬೇಕು. ಗರಿಷ್ಠ ವಯೋಮಿತಿ ಈ ಕೆಳಗಿನಂತೆ ಇದೆ.

**1.** ಸಾಮಾನ್ಯ ಅಭ್ಯರ್ಥಿಗಳಿಗೆ 35 ವರ್ಷಗಳು ಮೀರಿರಬಾರದು.

**2.** ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ 38 ವರ್ಷಗಳು ಮೀರಿರಬಾರದು.

3. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–1 ಅಭ್ಯರ್ಥಿಗಳಿಗೆ 40 ವರ್ಷಗಳು ಮೀರಿರಬಾರದು.
4. ಮಾಜಿ ಸೈನಿಕ ಅಭ್ಯರ್ಥಿಯು ಬಾರತದ ಸಶಸ್ತ್ರ ಪಡೆಯಲ್ಲಿ ಕನಿಷ್ಠ 15 ವರ್ಷ ಸೇವೆ ಸಲ್ಲಿಸಿರಬೇಕು ಮತ್ತು ಅವರು ಸಲ್ಲಿಸಿದ ಸೇವೆಯ ಜೊತೆಗೆ 3 ವರ್ಷಗಳ ವಯೋಮಿತಿಯ ರಿಯಾಯತಿಗೆ ಅರ್ಹರಿರುತ್ತಾರೆ. ಆದರೆ ಅವರ ವಯಸ್ಸು 45 ವರ್ಷ ಮೀರಿರಬಾರದು.
5. ವಿಧವೆ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿ ಮೇಲ್ಕಂಡಂತೆ ನಿಗದಿಪಡಿಸಿರುವ ವಯೋಮಿತಿಗೆ 10 ವರ್ಷ ಸೇರಿಸಿ ಪರಿಗಣಿಸಲಾಗುವುದು.

5. **ಅರ್ಜಿ ಶುಲ್ಕ :**

1) ಸಾಮಾನ್ಯ ಹಾಗೂ ಇತರೆ ಹಿಂದುಳಿದ ಅಭ್ಯರ್ಥಿಗಳಿಗೆ ರೂ.1200/– (2) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ–1 ಹಾಗೂ ಮಾಜಿ ಸೈನಿಕ ಅಭ್ಯರ್ಥಿಗಳಿಗೆ ರೂ.600/–

6. **ಅರ್ಜಿ ಸಲ್ಲಿಸುವ ವಿಧಾನ :**

(1) ಬ್ಯಾಂಕಿನ ವೆಬ್‌ಸೈಟ್ ಮೂಲಕ ಪ್ರಚುರಪಡಿಸಿದ ಲಿಂಕ್‌ನಲ್ಲಿ ಮಾತ್ರ Online ಮುಖಾಂತರ ಅರ್ಜಿ ಸಲ್ಲಿಸತಕ್ಕದ್ದು. (2) ಅರ್ಜಿಗಳನ್ನು ಸಲ್ಲಿಸುವಾಗ ಆಯಾ ಹುದ್ದೆಗಳ ಅರ್ಜಿಗಳನ್ನು ಆಯ್ಕೆ ಮಾಡಿ ಅರ್ಜಿ ಸಲ್ಲಿಸತಕ್ಕದ್ದು. (3) ಅರ್ಜಿಗಳನ್ನು Online ನಲ್ಲಿ ದಿ:04–07–2024 ರಿಂದ 31–07–2024 ರವರೆಗೆ ಸಾಯಂಕಾಲ 5.00 ಘಂಟೆವರೆಗೆ ಅವಕಾಶವಿರುವುದು. (5)ಅರ್ಜಿಯಲ್ಲಿಯ ಎಲ್ಲಾ ಅಂಕಣಗಳನ್ನು ಭರ್ತಿ ಮಾಡಿರಬೇಕು. (6)ಅಭ್ಯರ್ಥಿಗೆ ಕನ್ನಡ ಭಾಷಾ ಪರಿಜ್ಞಾನ ಕಡ್ಡಾಯವಾಗಿರುತ್ತದೆ. (7)ಕಂಪ್ಯೂಟರ ಇಂಜಿನೀಯರ ಹಾಗೂ ವಾಹನ ಚಾಲಕರಿಗೆ ಪ್ರಾವಿಣ್ಯತೆ ಪರೀಕ್ಷೆ ಹಾಗೂ ಸಂದರ್ಶನ ಜರುಗಿಸಲಾಗುವುದು.

7. **ಆಯ್ಕೆ ವಿಧಾನ :** ಮೇಲಿನ ವಿವಿಧ ದರ್ಜೆಯ ಹುದ್ದೆಗಳಿಗೆ (ಅಟೆಂಡರ್/ಜವಾನ/ವಾಚಮೆನ್ ಹಾಗೂ ವಾಹನ ಚಾಲಕ) ಇವರುಗಳಿಗೆ ಹೊರತುಪಡಿಸಿ ವಿವಿಧ ಅಭ್ಯರ್ಥಿಗಳಿಗೆ ನಿಗದಿಪಡಿಸಿದ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಶೇಕಡಾವಾರು ಅಂಕಗಳ ಆಧಾರದ ಮೇಲೆ ಲಿಖಿತ ಪರೀಕ್ಷೆ ಕರೆಯಲಾಗುವುದು. ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳನ್ನು ಶೇ.85 ಕ್ಕೆ ಇಳಿಸಿ 1:5 ರ ಅನುಪಾತದಲ್ಲಿ ಮೌಖಿಕ ಸಂದರ್ಶನಕ್ಕೆ ಕರೆಯಲಾಗುವುದು. ಇದರೊಂದಿಗೆ ಕಂಪ್ಯೂಟರ್ ಇಂಜಿನಿಯರ್ ಇವರಿಗೆ ಪ್ರಾವೀಣ್ಯತಾ ಪರೀಕ್ಷೆ ನಡೆಸಲಾಗುವುದು.

ಲಿಖಿತ ಪರೀಕ್ಷೆಯನ್ನು ಈ ಕೆಳಕಂಡ ವಿಷಯದ ಮೇಲೆ ನಡೆಸಲಾಗುವುದು.

| ಅ.ನಂ. | ವಿಷಯ | ಅಂಕಗಳು | ಅ.ನಂ. | ವಿಷಯ | ಅಂಕಗಳು |
|---|---|---|---|---|---|
| 1. | ಕನ್ನಡ ಭಾಷಾ | 40 | 2. | ಇಂಗ್ಲೀಷ ಭಾಷೆ | 30 |
| 3. | ಸಾಮಾನ್ಯ ಜ್ಞಾನ | 30 | 4. | ಸಹಕಾರ ಮತ್ತು ಬ್ಯಾಂಕಿಂಗ್ | 100 |
| | | | | **ಒಟ್ಟು** | **200** |

ಅಟೆಂಡರ್/ಜವಾನ/ವಾಚಮೆನ್ ಹಾಗೂ ವಾಹನ ಚಾಲಕ ಹುದ್ದೆಗಳಿಗೆ ನಿಗದಿಪಡಿಸಿದ ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಶೇಕಡಾವಾರು ಅಂಕಗಳ ಆಧಾರದ ಮೇಲೆ 1:5 ರ ಅನುಪಾತದಲ್ಲಿ ಮೌಖಿಕ ಸಂದರ್ಶನಕ್ಕೆ ಕರೆಯಲಾಗುವುದು. ಲಿಖಿತ ಪರೀಕ್ಷೆ ಮತ್ತು ಸಂದರ್ಶನದ ದಿನಾಂಕ, ಸ್ಥಳ ಮತ್ತು ಸಮಯ ಇವುಗಳ ವಿವರಗಳನ್ನು ಪ್ರತ್ಯೇಕವಾಗಿ ತಿಳಿಸಲಾಗುವುದು.

**8.** ಅಭ್ಯರ್ಥಿಗಳು ಈ ಕೆಳಗಿನ ದಾಖಲಾತಿಗಳನ್ನು ಸ್ಕ್ಯಾನ್ ಮಾಡಿ Online ನಲ್ಲಿ ಅರ್ಜಿಯೊಂದಿಗೆ ಅಪಲೋಡ್ ಮಾಡತಕ್ಕದ್ದು. (1) ಪಾಸ್‌ಪೋರ್ಟ ಅಳತೆಯ ಬಾವಚಿತ್ರ (2)ವಯಸ್ಸು ದೃಢೀಕರಣ ಕುರಿತು ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ/ ವರ್ಗಾವಣೆ ಪ್ರಮಾಣ ಪತ್ರ. (3)ವಿದ್ಯಾರ್ಹತೆ ಕುರಿತು ಪ್ರಮಾಣ ಪತ್ರ (4)ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ಪಂಗಡ, ಪ್ರವರ್ಗ–1, ಹಿಂದುಳಿದ ವರ್ಗದ ಹಾಗೂ ಇನ್ನಿತರ ಮೀಸಲಾತಿ ಸೌಲಭ್ಯ ಪಡೆಯಲಿಚ್ಛಿಸುವ ಅಭ್ಯರ್ಥಿಗಳು ಸರಕಾರದ ನಿಗದಿಪಡಿಸಿದ ನಮೂನೆಯಲ್ಲಿ ಸಂಬಂಧಿಸಿದವರಿಂದ ದೃಢೀಕರಣ ಪಡೆದ ಪ್ರಮಾಣ ಪತ್ರ (5)ಇತರೇ ಹಿಂದುಳಿದ ವರ್ಗಗಳ ಅಭ್ಯರ್ಥಿಗಳು ನಮೂನೆ ಎಫ್ ನಲ್ಲಿ ಸಂಬಂಧಿಸಿದ ತಹಶೀಲ್ದಾರರವರಿಂದ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ಬ್ಯಾಂಕು ಕೇಳಿದಾಗ ಮೂಲ ಪ್ರಮಾಣ ಪತ್ರಗಳನ್ನು ಪರಿಶೀಲನೆಗಾಗಿ ಸಲ್ಲಿಸತಕ್ಕದ್ದು.

**9.** **ಇತರೆ ನಿಯಮಗಳು :**

1) ಪೂರ್ಣ ವಿವರಗಳನ್ನು ಹೊಂದದೆ ಇರುವ ಹಾಗೂ ಅವಶ್ಯ ದಾಖಲಾತಿಗಳನ್ನು ಅಪ್‌ಲೋಡ್ ಮಾಡದೇ ಇರುವ ಹಾಗೂ ಅವಧಿ ಮೀರಿ ಅಪ್‌ಲೋಡ ಮತ್ತು ಟಪಾಲ್ ಮೂಲಕ ಬ್ಯಾಂಕಿನ ಸಲ್ಲಿಸಿದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
2) ಅಭ್ಯರ್ಥಿಗಳ ಆಯ್ಕೆ, ಅರ್ಜಿ ಸ್ವೀಕರಿಸುವ ಮತ್ತು ನಿರಾಕರಿಸುವ ಹಕ್ಕನ್ನು ನೇಮಕಾತಿ ಸಮಿತಿ ಕಾಯ್ದಿರಿಸಿಕೊಂಡಿದೆ.
3) ನೇಮಕಾತಿಯನ್ನು ಯಾವುದೇ ಕಾರಣ ನೀಡದೇ ಮುಂದೂಡುವ, ರದ್ದುಪಡಿಸುವ, ನಿಬಂಧನೆಗಳನ್ನು ಬದಲಾಯಿಸುವ ಸಂಪೂರ್ಣ ಹಕ್ಕನ್ನು ಬ್ಯಾಂಕು ಕಾಯ್ದಿರಿಸಿಕೊಂಡಿದೆ.
4) ಆಯ್ಕೆಗೊಂಡ ಅಭ್ಯರ್ಥಿಗಳು ಎರಡು ವರ್ಷದ ಅವಧಿಯ ಪರೀಕ್ಷಾರ್ಹ ಸೇವೆಯಲ್ಲಿ ಇರಬೇಕಾಗುವುದು ಮತ್ತು ಆಯ್ಕೆಗೊಂಡ ಅಭ್ಯರ್ಥಿಗಳು ಬ್ಯಾಂಕಿನಿಂದ ಸೂಚಿಸಲ್ಪಟ್ಟಂತೆ ಭದ್ರತೆ ನೀಡಬೇಕು.
5) ನೇಮಕಾತಿಗೆ ಸಂಬಂಧಿಸಿದಂತೆ ಬ್ಯಾಂಕಿನೊಂದಿಗೆ ಯಾವುದೇ ರೀತಿಯ ಪತ್ರ ವ್ಯವಹಾರ ಮಾಡಲು ಆಸ್ಪದವಿರುವುದಿಲ್ಲ.

ಸಹಿ/–
ಸಂಚಾಲಕ ಸದಸ್ಯರು ಹಾಗೂ
ಪ್ರಧಾನ ವ್ಯವಸ್ಥಾಪಕರು
ಶ್ರೀ ಸಿದ್ದೇಶ್ವರ ಸಹಕಾರಿ ಬ್ಯಾಂಕ ನಿ., ವಿಜಯಪುರ

ದಿನಾಂಕ:02–07–2024